ದಿ : **20-09-2025** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**ಮುಂದುವರಿದ ಮುಖ್ಯ ವಿಚಾರಣೆ:- 8ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಜೆ.ಎಸ್.ಆರ್ ರವರಿಂದ**

**1)** ದಿನಾಂಕ 10-12-1969ರಂದು ನನ್ನ ತಾಯಿಯಾದ 1ನೇ ಪ್ರತಿವಾದಿಯಾದ ರಾಧ ಆಕೆಯ ಹೆಸರಿಗೆ ಆತನ ಸೋದರ ಮಾವನಾದ ಅಣ್ಣಯ್ಯ ಮತ್ತು ಚಾಲಗೇಣಿ ಕ್ರಯ ಪತ್ರ

2) ದಿನಾಂಕ 10-12-1969ರಂದು 1ನೇ ಪ್ರತಿವಾದಿಯ ಅಣ್ಣನಾದ ನರಸಿಂಹ ಮರಕಾಲನಿಗೆ ಡೈವರ್ ಬಸಪ್ಪ ಎನ್ನುವವರು ಬರೆದುಕೊಟ್ಟ ಮೂಲಗೇಣಿ ಕ್ರಯ ಪತ್ರ

3) ದಿನಾಂಕ 04-09-2023ರಂದು 1ನೇ ಪ್ರತಿವಾದಿಯು ನನ್ನ ಪರವಾಗಿ ಬರೆದುಕೊಟ್ಟಿರುವ ವ್ಯವಸ್ಥಾ ಪತ್ರದ ಮೂಲ ಪ್ರತಿ

4) ದಿನಾಂಕ 06-02-2024ರಂದು 1ನೇ ಪ್ರತಿವಾದಿಯು ನನ್ನ ಪರವಾಗಿ ಬರೆದುಕೊಟ್ಟಿರುವ ವ್ಯವಸ್ಥಾ ಪತ್ರದ ದುರಸ್ಥಿ ಮೂಲ ಪ್ರತಿ

5) ದಿನಾಂಕ 16-11-2024ರಂದು 31ನೇ ಪ್ರತಿವಾದಿಯ ಪರವಾಗಿ ನಾನು ಬರೆದುಕೊಟ್ಟಿರುವ ಕ್ರಯ ಪತ್ರದ ಮೂಲ ಪ್ರತಿ.

6) ದಿನಾಂಕ 20-12-2024ರಂದು 1ನೇ ಪ್ರತಿವಾದಿಯು ನನ್ನ ಹಾಗೂ ನನ್ನ ಇಬ್ಬರು ಸಹೋದರರು ಮತ್ತು ಒಬ್ಬ ಸಹೋದರಿಯಾದ 6 ರಿಂದ 8ನೇ ಪ್ರತಿವಾದಿಯವರ ಪರವಾಗಿ ಬರೆದುಕೊಟ್ಟಿರುವ ವ್ಯವಸ್ಥಾ ಪತ್ರದ ಮೂಲ ಪ್ರತಿ ಹಾಜರು ಮಾಡಿದ್ದೇನೆ.

ಸದರಿ ದಾಖಲೆಗಳನ್ನು ಕ್ರಮವಾಗಿ **ನಿ.ಡಿ - 1 ರಿಂದ 6** ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ವಜಾ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಪಾಟೀ **ಸವಾಲು :** ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**